

ಅಲ್ನೋಡಿದ್ರೆ ಕಾಯಿಗೆ, ಕೊಬ್ರಿಗೆ ಬೆಲೆನೂ ಏರಿರಲ್ಲ, ಅಸಲಿ ಬೆಲೆನೂ ಹುಟ್ಟಲ್ಲ ಅಂತ ನಮ್ಮೂರಿನ್ ರವಿಯಣ್ಣ ಆಗಾಗ್ಗೆ ಗೊಣಗೋದುಂಟು. ಹೆಂಗೋ ಕೊಬ್ರಿನ ಮಾರ್ಕೆಟ್ಟಲ್ಲಿ ಸುರ್ದು ಮನೆಗೋದ್ರೆ ಕಾಸ್ ಏಣ್ಸೋಕೆ ತಿಂಗಳುಗಟ್ಲೆ ಕಾಯ್ಬೇಕು ಕೆಲವೊಂದ್ಸಲ. ಇತ್ಲಾಗೆ ಕಾಯೊ ಕೊಬ್ರಿನೊ ಕೊಂಡ್ ಕೊಂಡ ಸಾವ್ಕಾರ ಲಾರಿಗಟ್ಲೆ ಲೋಡ್ ಮಾಡಿ ರಾಜ್ದಾನಿಗೆ, ಬೇರೆ ರಾಜ್ಯಕ್ಕೆ ಕಳ್ಸೋದು, ಅಲ್ಲಿ ವ್ಯಾಪಾರ ಆಗಿ ಆ ದುಡ್ ಬಂದ್ರೆ ಇಲ್ಲಿ ನಮ್ಮೂರಿನ್ ರವಿಯಣ್ಣಂಗೆ ಕಾಸ್ ದಕ್ತದೆ. ಬೆಲೆ ಬಿದ್ದೋದ್ರೆ, ವೆಹಿಕಲ್ ಏನಾದ್ರೂ ಅಪ್ಘಾತಕ್ಕೊಳಗಾದ್ರೆ, ಲಾರಿ ಡ್ರೈವರ್ ಇರ್ತಾನಲ್ಲ ಅವ್ನೇನಾದ್ರೂ ದುರಾಸೆಗ್ ಬಿದ್ದು ಲಾರಿ ಸಮೇತ ಎಸ್ಕೇಪ್ ಆದ್ರೆ... ಹೌದೌದು ಈ ಎಲ್ಲಾ ಛಾನ್ಸಸ್ ಉಂಟು... ಇವೆಲ್ಲ ಆದ್ರೆ ಸಾವ್ಕಾರನ್ ಕತೆ ಗೋವಿಂದ. ಹಿಂಗೇ ಆಗಿ ಎಷ್ಟೋ ಮಂದಿ ಸಾವ್ಕಾರ್ರು ಪಾಪರ್ ಎದ್ದೋಗಿದಾರೆ. ಆಗ ರೈತಂಗೂ ಲಾಸ್. ಹಂಗಂತ ಕೆಲ್ವೊಮ್ಮೆ ಸಾವ್ಕಾರು ಈ ಲಾಸಿನ ಗುಟ್ಟನ್ನೆಲ್ಲ ಬಿಟ್ಕೊಡಲ್ಲ. ಹೆಂಗೊ ಮಾಡಿ ಕೆಲವ್ರಾದ್ರೂ ರೈತ್ರಿಗೆ ಕಾಸು ಕೊಟ್ಟು ನಂಬ್ಕೆ ಉಳುಸ್ಕೊಂಡು ಮುಂದಿನ ವ್ಯವಾರುಕ್ಕೆ ರೆಡಿಯಾಗ್ತಾರೆ. ಇಲ್ಲಾಂದ್ರೆ ವ್ಯಾಪಾರ ನಡೀಬೇಕಲ್ಲ. ಮುಂದಿನ್ ಬಾಳು ಸಾಗ್ಬೇಕಲ್ಲ.

ತೆಂಗಿನ್ ಕತೆ ಇಷ್ಟುಕ್ಕೆ ಮುಗೀನಿಲ್ಲ. ರೋಗ ಮನುಷ್ಯಂಗೆ ಬರ್ದೆ ಮರುಕ್ಕ್ ಬಂದಾತೆ ಅಂತ ಗಾದೆನೆ ಸುಳ್ ಮಾಡಿದ್ ಮಹಾಮರವಿದು. ಒಂದ್ಸಲ ನುಸಿರೋಗ ಬಂದು ಇಡೀ ಸೀಮೆಯ ತೆಂಗುಗಳೆಲ್ಲ ಸರ್ವನಾಶವಾದಂತೆ ಹಾಳಾಗೋಗಿದ್ವು. ಅದೆಷ್ಟೊ ವರ್ಷ ಈ ವಲಯ ಹಾಳು ಹಂಪೆಯಂತಾಗ್ಬಿಟ್ಟಿತ್ತು. ನಿಧಾನಕ್ಕೆ ಚೇತರಿಕೊಳ್ಳೋಷ್ಟರಲ್ಲಿ, ಹೊಸ ಸಸಿ ನೆಟ್ಟು ಅವು ದೊಡ್ಡೋವಾಗೋಷ್ಟ್ರಲ್ಲಿ ರೈತ ಹೈರಾಣು.

ನಾಕೈದ್ ಸಾವ್ರ ತೆಂಗಿದಾವೆ ಅನ್ನೋದೆ ದೊಡ್ಡಸ್ತಿಕೆ ಮಾತು, ಅಂತವ್ರ ಮನೆಗೆ ಹೆಣ್ಣ್ ಕೊಡೋಕೆ ಸಾಲಿರ್ತಿತ್ತು. ಆದ್ರೀಗ ಅಂತ ಮಾತೆಲ್ಲ ಇಂಗಿ ಹೋಗಿ ಯೋಚ್ನೆ ಶುರುವಾದ್ ಕಾಲವೂ ಬಂದಿತ್ತು. ಒಮ್ಮೊಮ್ಮೆ ದೊಡ್ಡ ಬಿರುಗಾಳಿ ಹೊಡೆದು, ಜಡಿಮಳೆ ಸುರಿದು, ಹತ್ತಾರು ತೆಂಗಿನ ಮರ್ಗಳೇ ಬಿದ್ದವು ಅಂದಾಗಲೂ ಆದ ಲಾಸಿಗೆ ಯಾರ್ ತಾನೆ ಕಣ್ಣೀರಿಡಲ್ಲ ಹೇಳಿ. ಹಿಂಗೆ ಲಾಭ ನಷ್ಟ ಒಟ್ಟೊಟ್ಟಿಗೆ ಕಾಣ್ಸೊ ತೆಂಗಿನ ಮಹಿಮೆನೆ ಅಪಾರ.

ಈ ತೆಂಗಿನ್ ಕಾಯ್ನ ತುರ್ದು ಉಳ್ಯೋ ಕರಟ್ದಲ್ಲಿ ಅದೆಷ್ಟ್ ಥರದ್ ಕಲಾಕೃತಿ ಮಾಡ್ತಾರಂತ ನಮ್ಮೂರಿನ್ ಹರೀಶರನ್ನ ಕೇಳಿದ್ರೆ ಗೊತ್ತಾಗೊದು. ಅವ್ರು ಕೊಬ್ರೀಲಿ ಅದೇನ್ ಛಂದಕ್ಕೆ ಕೆತ್ನೆ ಮಾಡ್ತಾರಂದ್ರೆ ಯಾವ್ದೆ ಮದ್ವೆಲಿ ಅವ್ರ ಕೊಬ್ರಿ ಕೆತ್ನೆ ಡಿಸೈನ್ ಇಲ್ದೆ ಮದ್ವೇನೆ ನಡ್ಯೋಲ್ಲ ಅನ್ನೋಷ್ಟು. ಇನ್ನು ಇದ್ರಿಂದ ಭಟ್ಟಿ ಇಳಿಸಿದ ನೀರಾ ಕುಡ್ಸಿದ್ ಕೀರ್ತಿ ನಮ್ಮೂರಿನ್ ಗೆಳತಿಗೆ ಸಲ್ಬೇಕು. ರೋಗ ಬಂದ್ ಟೈಮಲ್ಲಿ ನೀರಾನೆ ಕಾಪಾಡಿದ್ ಅಂತ ಕೂಡ ಹೇಳ್ತಾರೆ. ಈ ದೇಶ್ದಿಂದ ಪ್ಯಾಕೇಟಲ್ಲಿ ಬಂಧಿಯಾಗಿ ರಫ್ತಾಗೊ ಕಾಯಿ ಬೇರೆ ದೇಶ್ದಲ್ಲಿ ಅಷ್ಟು ರುಚಿಯಿರಲ್ಲ ಅಂತ ಒರಿಜಿನಲ್ ಸ್ವಾದ ಕಂಡಿರೋರ ಅಭಿಪ್ರಾಯ, ಅದಕ್ಕೋಸ್ಕರ ಒಂದ್ಸಲ ನಮ್ ಫ್ರೆಂಡ್ ಅಸಲಿ ಸೊಗಡಿರೊ ತೆಂಗಿನತುರಿ ಸಿಗುತ್ತಾ ನೋಡಿ, ಅದನ್ ರಫ್ತು ಮಾಡ್ಬಹುದ್ದ ಅಂತೇಳಿ ಸಾಕಷ್ಟು ಪ್ರಯೋಗ ನೋಡಿದ್ವಿ. ಉಹುಂ! ಆಗಷ್ಟೇ ತುರಿದ ತೆಂಗಿನ ಸ್ವಾದ ಪಾಕೇಟಿನ ತುರಿಲಿ ಸಿಗಲ್ಲ. ಆ ಮಟ್ಗೆ ಪುಣ್ಯ ನಮ್ದು.

ಕಳೆದ ವಾರದ 'ಚೆನ್ನುಡಿ'
'ಅಂದದೂರು ಬೆಂಗಳೂರು
ಆನಂದದ ತವರೂರು...'
ಕೇಳಿ **ಬಿ.ಕೆ. ಸುಮತಿ** ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



ತೆಂಗಿನ್ ಮರದ ಕುರಿತು ಜನಪದ ಕತೆಗಳೂ ಕೂಡ ಚಾಲ್ತಿಯಲ್ಲಿವೆ. ಒಂಥರಾ ಫ್ಯಾಂಟಸಿ ಜಗತ್ತದು. ರಾಜ್ಕುಮಾರನೊಬ್ಬ ಮದ್ವೆ ಆಗಕ್ಕೆ ಹೆಣ್ ಹುಡುಕ್ಕೊಂಡ್ ಹೊರ್ಟ್ರು, ಸನ್ಯಾಸಿಗ್ ಸಿಕ್ಕಿ ಅವ ತೆಂಗಿನ್ ಕಾಯೊಂದ್ನ ಮಂತ್ರಿಸಿ ಕೊಟ್ರೆ, ಈ ರಾಜ್ಕುಮಾರ ಎಡವಟ್ ಮಾಡ್ಕಂಡು ಕುಂಬಾರನ್ ಹೆಂಡ್ತಿ ಕೈಗೆ ಕಾಯ್ ಸಿಗುವಂಗೆ ಮಾಡಿ ಅವ್ಳು ದುರುಪ್ಯೋಗ ಮಾಡ್ಕಂಡು ತಾನು ರಾಜ್ಕುಮಾರಿಯಾಗೋಕ್ ಹೊರ್ಟ್ರು, ಇತ್ಲಗೆ ಈ ತೆಂಗಿನ್ ಕಾಯ್ ರಾಜ್ಕುಮಾರಿ ಹೆಂಗೆಂಗೋ ದನ ಕಾಯೋನ್ ಮೂಲ್ಕ ಪುನಾ ಅರ್ಮನೆ ಸೇರಿ, ಕುಂಬಾರನ್ ಹೆಡ್ತಿಗೆ ಶಿಕ್ಷೆ ಕೊಡ್ಸಿ ತಾನ್ ಮಹಾರಾಣಿಯಾಗೋ ಕತೆ ಅದು. ಸಾಮಾನ್ಯವಾಗಿ ಎಲ್ಲಾ ಜಾನ್ಪದ್ ಕತೆಗಳು ಅಮೂರ್ತವಾಗಿ ನಂತ್ರ ಮೂರ್ತ ರೂಪ ಪಡಿತವೆ. ಇಲ್ಲೂ ಹಂಗೇ ಆಗಿ ಕೊನೆಗೆ ಸುಖಾಂತ್ಯ ಕಂಡಿದೆ.

ಜಗತ್ತಿನ್ ಬೇರ್ಬೇರೆ ದೇಶ್ದಲ್ಲಿ ತೆಂಗಿಗೆ ಬೇರ್ಬೇರೆ ಹೆಸ್ರಿದೆ. ಅವ್ಗಳ್ನ ಓದೋಕೆ ಚಂದ. ತೆಂಗುನ್ನ ಬಳ್ಸೊ ವಿಧಾನ, ಮಾದರಿ, ಉಪ್ಯೋಗ, ಕತೆಗಳು, ಅನುಕೂಲ ಎಲ್ಲಾ ಒಟ್ಗೆ ಸೇರ್ಸಿ ಕೂಡಿ, ಗುಣ್ಸಿದ್ರೆ ನಿಜ್ಕೂ ಅಪ್ರೂಪುದ್ ಮರ ಅನ್ಸೋದ್ರಲ್ಲಿ ಡೌಟೇ ಇಲ್ಲ. ಇಂತಾ ಕಲ್ಪತ್ರು ನಾಡ್ ನಮ್ದು ಅನ್ನದು ಹೆಮ್ಮೆ ಮೂಡ್ಸೋದು ಸಹಜ ತಾನೆ!

